**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಕುಮಟಾ**

**ಸಿ ಸಿ ನಂಃ 1118/2021**

ಫಿರ್ಯಾದಿಃ ಸರಕಾರ ವಿರುದ್ಧ ಆರೋಪಿತರು:ಸಂತೋಷ ತಂದೆ ಚಂದ್ರಶೇಖರ ಲಕ್ಕುಮನೆ

**ದೋಷಾರೋಪಣೆ**

ಶ್ರೀ ನರೇಂದ್ರ ಬಿ. ಆರ್, ಬಿ.ಎಸ್.ಸಿ., ಎಲ್.ಎಲ್.ಬಿ.,
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ

ನಾನು ನಿಮ್ಮ ಅಂದರೆ –

1. ಸಂತೋಷ ತಂದೆ ಚಂದ್ರಶೇಖರ ಲಕ್ಕುಮನೆ ,
   ವಯಸ್ಸು 35 ವರ್ಷ,
   ವಾಸಃ ಅಘನಾಶಿನಿ, ಕುಮಟಾ
2. ವಿನೋದ್ ನಾರಾಯಣ ಖಾರ್ವಿ
   ವಯಸ್ಸುಃ 35 ವರ್ಷ,
   ವಾಸಃ ಕರಿಕಲ್, ಭಟ್ಕಳ
3. ಶ್ರೀಮತಿ ಹೇಮಾ ವಿನೋದ್ ಖಾರ್ವಿ,
   ವಯಸ್ಸುಃ 24 ವರ್ಷ,
   ವಾಸಃ ಕರಿಕಲ್, ಭಟ್ಕಳ
4. ಕವಿತಾ ಚಂದ್ರಶೇಖರ ಲಕ್ಕುಮನೆ,
   ವಯಸ್ಸುಃ 31 ವರ್ಷ,
   ವಾಸಃ ಅಘನಾಶಿನಿ, ಕುಮಟಾ

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ-

ಕುಮಟಾ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಅಘನಾಶಿನ ಬಿಳಿಹೊಯ್ಗಿಯಲ್ಲಿ ಆರೋಪಿತರಾದ ನೀವು ನಿಮ್ಮ ಮನೆಯ ಗಡಿ ಜಾಗಾದ ವಿಷಯದಲ್ಲಿ ಫಿರ್ಯಾದಿಯವರೊಂದಿಗೆ ದ್ವೇಷದಿಂದ ಇದ್ದು, ಫಿರ್ಯಾದಿಯ ಮನೆಯ ಜನರೊಂದಿಗೆ ತಂಟೆ ತಕರಾರು ಮಾಡುತ್ತಾ ಅವಾಚ್ಯ ಶಬ್ದದಿಂದ ಬೈಯುತ್ತಾ ಮಾನಸಿಕ ತೊಂದರೆ ಕೊಡುತ್ತಾ ಬಂದಿದ್ದು, ದಿನಾಂಕ 25.12.2020 ರಂದು 8.45 ಗಂಟೆಯ ಸುಮಾರಿಗೆ ಫಿರ್ಯಾದಿಯವರು ತಮ್ಮ ಹಳೆಯ ಮನೆಯ ಹತ್ತಿರ ಹೋಗುತ್ತಿದ್ದಂತಹ ಸಮಯದದಲ್ಲಿ, ಫಿರ್ಯಾದಿಯವರು ಮನೆಯ ಹತ್ತಿರ ಕಾಲು ದಾರಿಯಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ತಕ್ಷೀರು ನಡೆಸುವ ಸಮಾನ ಉದ್ದೇಶದಿಂದ ಫಿರ್ಯಾದಿಯವರನ್ನು ಅಡ್ಡಗಟ್ಟಿ ತಡೆಗಟ್ಟಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **341 ಸಹಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಮೇಲೆ ಹೇಳಿದ ದಿನಾಂಕ**,** ಸಮಯ ಹಾಗೂ ಸ್ಥಳದಲ್ಲಿ **1** ರಿಂದ **4** ನೇ ಆರೋಪಿತರಾದ ನೀವು ತಕ್ಷೀರು ನಡೆಸುವ ಸಮಾನ ಉದ್ದೇಶದಿಂದ ಫಿರ್ಯಾದಿಯವರನ್ನು ಉದ್ದೇಶಿಸಿ "ಬೇವರ್ಶಿ ರಂಡೆ ಸೂಳಾ ರಂಡೆ " ಅಂತಾ ಅವಾಚ್ಯ ಶಬ್ದದಿಂದ ಬೈದಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **504 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ತಕ್ಸೀರು ನಡೆಸುವ ಸಮಾನ ಉದ್ದೇಶದಿಂದ ನಿಮ್ಮಗಳ ಪೈಕಿ 3 ಮತ್ತು 4 ನೇ ಆರೋಪಿತರಾದ ನೀವು ಫಿರ್ಯಾದಿಯವರ ಕೈ ಹಿಡಿದು ಎಳೆದು ನೆಲಕ್ಕೆ ದೂಡಿ ಹಾಕಿದ್ದಲ್ಲದೇ 1 ಮತ್ತು 2 ನೇ ಆರೋಪಿತರಾದ ನೀವು ಫಿರ್ಯಾದಿಯವರು ಧರಿಸಿದ ನೈಟಿಯನ್ನು ಹಿಡಿದು ಎಳೆದು ಹರಿದು ಅವರ ಮಾನಕ್ಕೆ ಭಂಗವನ್ನುಂಟು ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **354 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ತಕ್ಸೀರು ನಡೆಸುವ ಸಮಾನ ಉದ್ದೇಶದಿಂದ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಫಿರ್ಯಾದಿಯವರಿಗೆ ಕೈಯಿಂದ ಮೈಮೇಲೆ ಕುತ್ತಿಗೆ ಮೇಲೆ ಹೊಡೆದು ಸಾದಾ ಗಾಯ ಪಡಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **323 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ತಕ್ಸೀರು ನಡೆಸುವ ಸಮಾನ ಉದ್ದೇಶದಿಂದ ಫಿರ್ಯಾದಿಯವರಿಗೆ "ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಒಬ್ಬೊಬ್ಬರನ್ನೆ ಮುಗಿಸುತ್ತೇವೆ"ಎಂದು ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **506 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ನೀವು ಮೇಲಿನ ಆರೋಪಗಳಡಿಯಲ್ಲಿ ವಿಚಾರಣೆಗೆ ಗುರಿಯಾಗ ತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಭಾಷ್ಷೆಯಲ್ಲಿ ಓದಿ ತಿಳಿಸಿ ಹೇಳಿ ಆರೋಪಿ ಉತ್ತರಿಸಿದ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬರೆದುಕೊಂಡದ್ದಾಗಿದೆಯೆಂದು ನಾನು ಈ ಮೂಲಕ ದೃಢೀಕರಿಸುತ್ತೇನೆ)

ಸಹಿ

ದಿಃ 20.11.2021

**(ನರೇಂದ್ರ ಬಿ.ಆರ್)**
ಪ್ರಧಾನ **ಪ್ರ.ದ.ನ್ಯಾದಂಡಾಧಿಕಾರಿ, ಕುಮಟಾ.**